ISSN: 2249-894X IMPACT FACTOR : 5.2331(UIF) VOLUME - 6 | ISSUE - 12 | SEPTEMBER - 2017

REVIEW OF RESEARCH

# ಸರಕು ಮತ್ತು ಸೇವಾ ತೆರಿಗೆ: ಲಕ್ಷಣಗಳು, ಲಾಭಗಳು ಮತ್ತು ಅನಾನುಕೂಲಗಳು

**ಡಾ. ನಾರಾಯಣ ಅರುಂದೇಕರ[1] , ಡಾ. ಚಂದ್ರಪ್ರಭಾ ಎಮ್. ಪಟಗಾರ[2] , ವಿಶ್ವನಾಥ ವಿ. ಕಲ್ಮೇಶ್ವರ[3]**
[1]ಅತಿಥಿ ಉಪನ್ಯಾಸಕರು, ಅರ್ಥಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ನವಬಾಗ, ವಿಜಯಪುರ.
[2]ಸಹಾಯಕ ಉಪನ್ಯಾಸಕರು, ಅಪರಾಧ ಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹಾವೇರಿ.
[3] ಅತಿಥಿ ಉಪನ್ಯಾಸಕರು, ವಾಣಿಜ್ಯ ಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ನವಬಾಗ, ವಿಜಯಪುರ.

## ಪೀಠಿಕೆ :–




ಭಾರತ ದೇಶದಲ್ಲಿಯೇ ಪರೋಕ್ಷ ತೆರಿಗೆಗಳ ಸುಧಾರಣೆಯ ಹಾದಿಯಲ್ಲಿ ಸರಕು ಮತ್ತು ಸೇವಾ ತೆರಿಗೆಯ ಜಾರಿಯು ಮಹತ್ವದ ಹೆಜ್ಜೆ ಎಂದು ಹೇಳಬಹುದು. ಇದನ್ನು 1991ರ ನಂತರ ಅತಿ ದೊಡ್ಡ ಆರ್ಥಿಕ ಸುಧಾರಣೆ ಎಂದು ಬಣ್ಣಿಸಲಾಗಿದೆ ಹಾಗೂ ಇದನ್ನು "ಹೊಸ ಸಹಕಾರಿ ಹಣಕಾಸು ಒಕ್ಕೂಟ" ಮತ್ತು **"ಒಂದೇ ದೇಶ ಒಂದೇ ತೆರಿಗೆ ಒಂದೇ ಮಾರುಕಟ್ಟೆ"** ಎಂದೆಲ್ಲಾ ಜಯಕಾರ ಹಾಕುತ್ತಿದ್ದಾರೆ.

ಇದು ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಜಾರಿಯಲ್ಲಿರುವ ವಿವಿಧ ಬಗೆಯ ತೆರಿಗೆಗಳನ್ನು ವಿಲೀನಗೊಳಿಸಿ ಏಕರೂಪ ತೆರಿಗೆ ಪದ್ಧತಿ ಜಾರಿಗೊಳಿಸುವದರಿಂದ "ತೆರಿಗೆ ಮೇಲೆ ತೆರಿಗೆ" ದುಷ್ಪರಿಣಾಮಗಳನ್ನು ನಿವಾರಿಸಿ ದೇಶಾದ್ಯಂತ ಒಂದೇ ಬಗೆಯ ಮಾರುಕಟ್ಟೆಗೆ ದಾರಿ ಮಾಡಿಕೊಡುತ್ತದೆ.

## ಹಿನ್ನಲೆ:–

ಅಂದಿನ ಕೇಂದ್ರ ಸರಕಾರದ ಆರ್ಥಿಕ ಮಂತ್ರಿಗಳು ಮಂಡಿಸಿದ 2006–07ರ ಸಾಲಿನ **"**ಮುಂಗಡ ಪತ್ರ**"** ದಲ್ಲಿ ಮೊಟ್ಟ ಮೊದಲ ಬಾರಿಗೆ ಪ್ರಸ್ತಾಪಿಸಲಾಗಿತ್ತು. ನಂತರ ಕೇಂದ್ರ ಮತ್ತು ರಾಜ್ಯ ಸರಕಾರದ ಹಣಕಾಸು ಸಚಿವರನ್ನು ಒಳಗೊಂಡ ಒಂದು **"**ಅಧಿಕಾರಯುಕ್ತ**"** ಸಮಿತಿ ರಚಿಸಲಾಗಿತ್ತು. ಈ ಸಮಿತಿಯು ಸುದೀರ್ಘ ಸಮಾಲೋಚನೆಯ ತರುವಾಯ 2009 ರಲ್ಲಿ ತನ್ನ ಮೊದಲ ಚರ್ಚಾ ಪತ್ರವನ್ನು ನೀಡಿತು. ಇದೇ ಸರಕು ಮತ್ತು ಸೇವಾ ತೆರಿಗೆಯ (GST) ಕುರಿತು ಇದುವರೆಗೂ ನಡೆದಿರುವ ಎಲ್ಲಾ ಚರ್ಚೆಗಳಿಗೆ ತಳಹದಿಯಾಗಿದೆ.

## ಜಿ. ಎಸ್. ಟಿ. ಯ ಲಕ್ಷಣಗಳು :–

ಪ್ರಸ್ತುತ ಜಾರಿಯಲ್ಲಿರುವ ಸರಕು ಉತ್ಪಾದನೆ ಮತ್ತು ಮಾರಾಟ ತೆರಿಗೆ ಪದ್ಧತಿಯ ಬದಲಾಗಿ ಜಿ. ಎಸ್. ಟಿ. ಯು ಸರಕು ಸೇವೆಗಳ ಪೂರೈಕೆಗೆ ಅನ್ವಯಿಸುತ್ತದೆ. ಇದು ಪೂರೈಸಲಾದ ಸರಕು ಮತ್ತು ಸೇವೆಗಳ **"**ಬಳಕೆಯ ಸ್ಥಳ ಆಧಾರಿತ ತೆರಿಗೆ**"** ಆಗಿರುತ್ತದೆ.

ಇದು ಕೇಂದ್ರ ಮತ್ತು ರಾಜ್ಯಗಳೆರಡು ಏಕಕಾಲಕ್ಕೆ ಒಂದೇ ತೆರಿಗೆ ವ್ಯಾಪ್ತಿ ವಿಧಿಸುವ ದ್ವಿಮುಖ ತೆರಿಗೆಯಾಗಿರುತ್ತದೆ. ರಾಜ್ಯದೊಳಗೆ ಪೂರೈಕೆಯಾಗುವ ಸರಕು ಮತ್ತು ಸೇವೆಗಳಿಗೆ ಕೇಂದ್ರ ಸರಕಾರ ವಿಧಿಸುವ ತೆರಿಗೆಯನ್ನು ಸಿ. ಜಿ. ಎಸ್ ಟಿ. [CGST] ಎಂತಲೂ ರಾಜ್ಯಗಳಿಗೆ ವಿಧಿಸುವ ತೆರಿಗೆಯನ್ನು ಎಸ್. ಜಿ. ಎಸ್. ಟಿ. [SGST] ಎಂದು ಕರೆಯಲಾಗುತ್ತದೆ.

ಈ ತೆರಿಗೆಯ ಮಾದಕ ಪಾನಿಯಗಳು ಮತ್ತು ಐದು ಪೇಟ್ರೋಲಿಯಂ ಪದಾರ್ಥ, ಮೋಟಾರ ಸ್ಪಿರೀಟ, ಹೈಸ್ಪಿಡ ಡಿಸೇಲ್, ನೈಸರ್ಗಿಕ ಅನಿಲ ಮತ್ತು ವೈಮಾನಿಕ ಇಂಧನ ಹೊರತುಪಡಿಸಿದಂತೆ, ಉಳಿದೆಲ್ಲಾ ಸರಕುಗಳಿಗೆ ಮತ್ತು ಕೆಲವೊಂದು ಹೆಸರಿಸಲಾದ ನಿರ್ದಿಷ್ಟ ಸೇವೆಯನ್ನು ಹೊರತುಪಡಿಸಿ ಉಳಿದೆಲ್ಲಾ ಸೇವೆ ಗಳಿಗೂ ಅನ್ವಯವಾಗುತ್ತದೆ.

ಪ್ರಸ್ತುತ ಜಿ ಎಸ್ ಟಿ ಪರಿಷತ್ತಿನ ಸಿಫಾರಸ್ಸುಗಳನ್ನು ಆಧರಿಸಿಯೇ ಸಿ. ಜಿ. ಎಸ್. ಟಿ. ಮತ್ತು ಎಸ್. ಜಿ. ಎಸ್. ಟಿ. ವಿಧಿಸಲಾಗುತ್ತದೆ. ರಾಜ್ಯಗಳು ಎಸ್. ಜಿ. ಎಸ್. ಟಿ. ದರಗಳನ್ನು ನಿಗಧಿ ಮಾಡುವದಕ್ಕಾಗಿ ಒಂದು ತಳ ಮಟ್ಟದ ತೆರಿಗೆಯನ್ನು ಸೂಚಿಸಿ ತೆರಿಗೆಗಳ ಸಣ್ಣ ಪಟ್ಟಿ ಇರುತ್ತದೆ ಹಾಗೂ ಜಿ. ಎಸ್. ಟಿ. ಪರಿಷತ್ತಿನ ತಿರ್ಮಾನದಂತೆ ಕೇಂದ್ರ ಮತ್ತು ರಾಜ್ಯಗಳ ಸರಕು

ಹಾಗೂ ಸೇವೆಗಳ ವಿನಾಯಿತಿ ತೆರಿಗೆಗಳ ಬಡ್ಡಿ ಒಂದೇಯಾಗಿರುತ್ತದೆ.

ಸರಕು ಮತ್ತು ಸೇವೆಗಳ ಅಂತರಾಜ್ಯ ಪೂರೈಕೆಯ ಮೇಲೆ ಕೇಂದ್ರ ಸರಕಾರವು ಸಂಯುಕ್ತ ಐ. ಜಿ. ಎಸ್. ಟಿ. [IGST] ಯನ್ನು ವಿಧಿಸಿ ವಸೂಲು ಮಾಡುತ್ತದೆ. ಐ. ಜಿ. ಎಸ್. ಟಿ. ಯಲ್ಲಿನ ಎಸ್. ಜಿ. ಎಸ್. ಟಿ. ಯ ಭಾಗವನ್ನು ಸರಕು ಅಥವಾ ಸೇವೆಗಳ ಯಾವ ರಾಜ್ಯದಲ್ಲಿ ಅಂತಿಮವಾಗಿ ಬಳಸಲ್ಪಡುತ್ತದೆಯೋ ಆ ರಾಜ್ಯಕ್ಕೆ ಅದನ್ನು ವರ್ಗಾಯಿಸಲಾಗುತ್ತದೆ.

### ಜಿ ಎಸ್ ಟಿಯ ಕುರಿತಾದ ಸಂವಿಧಾನ ತಿದ್ದುಪಡಿ ಮತ್ತು ಇತರೆ ಶಾಸನಾತ್ಮಕ ಕ್ರಮಗಳು:

ಮೇಲೆ ವಿವರಿಸಲಾದ ಎಲ್ಲಾ ಜಿ. ಎಸ್. ಟಿ. ಲಕ್ಷಣಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಂವಿಧಾನ ತಿದ್ದುಪಡಿ ಮಸೂದೆಯನ್ನು ಸಂಸತ್ತಿನ ಉಭಯ ಸಧನಗಳು 122ನೇ ತಿದ್ದುಪಡಿಯಾಗಿ ಅಂಗೀಕರಿಸಿದವು. ಅರ್ಧ ಸಂಖ್ಯೆಯ ರಾಜ್ಯಗಳ ಶಾಸನ ಸಭೆಗಳ ಅನುಮೋದನೆ ದೊರೆತು ರಾಷ್ಟ್ರಪತಿಗಳ ಅಂಕಿತ ದೊರೆಯುವ ಮೂಲಕ ಸಂವಿಧಾನ ತಿದ್ದುಪಡಿಯು ಸಂಪೂರ್ಣವಾಗಿರುತ್ತದೆ. ಸದರಿ ಜಿ. ಎಸ್. ಟಿ. ಯು 101ನೇ ತಿದ್ದುಪಡಿ ಕಾಯಿದೆಯಾಗಿ ಜಾರಿಗೆ ಬಂದಿರುತ್ತದೆ.

ಇದರಲ್ಲಿ ಮದ್ಯಪಾನಿಯಗಳನ್ನು ಹೊರತುಪಡಿಸಿದ ಜಿ ಎಸ್ ಟಿಯನ್ನು ವಿಧಿಸತಕ್ಕದ್ದು ಹಾಗೂ ಸ್ಥಳಿಯ ಸಂಸ್ಥೆಗಳು ವಿಧಿಸುವ ಮನರಂಜನೆ ಮತ್ತು ಮೊಜುಗಳನ್ನು ಹೊರಗಿಡಲಾಗಿದೆ. ಅದೇ ರೀತಿ ಜಿ. ಎಸ್. ಟಿ. ಪರಿಷತ್ತಿನ ರಚನಾ ಪ್ರಕ್ರಿಯೆಯ ಸಮಗ್ರ ವಿವರಣೆ ಒಳಗೊಂಡಿದೆ. ಇದರ ಪ್ರಕಾರ ಜಿ. ಎಸ್. ಟಿ. ಪರಿಷತ್ತಿನಲ್ಲಿ ಯಾವುದೇ ನಿರ್ಣಯವು ಸಭೆಯಲ್ಲಿ ಹಾಜರಿದ್ದು ಮತಚಲಾಯಿಸಿದ 3/4 ಕ್ಕಿಂತ ಕಡಿಮೆ ಇಲ್ಲದ್ದು ಬಹುಮತದಿಂದ ನಿರ್ಣಯಗಳು ಅಂಗೀಕಾರವಾಗುತ್ತದೆ.

### ಜಿ. ಎಸ್. ಟಿ. ಜಾರಿಯಿಂದಾಗಿ ಲಾಭಗಳು:

ಮಾದರಿ ಕಾಯಿದೆ ರಚಿಸುವಾಗ ತೆರಿಗೆ ಕಾಯಿದೆಯಲ್ಲಿ ಸ್ಪಷ್ಟತೆ ಇರಬೇಕು. ತೆರಿಗೆ ಕಾಯಿದೆಗಳು ಸೂಲಲಿತವಾಗಿ ಜಾರಿಗೂಳಿಸುವಂತಿರಬೇಕು ಹಾಗೂ ತೆರಿಗೆದಾರನ ಸ್ನೇಹಿಯಾಗಿರಬೇಕು. ಇದರ ಜೊತೆಗೆ ವ್ಯಾಪಾರಕ್ಕೆ ಅಡ್ಡಿ ಆತಂಕಗಳನ್ನು ಸೃಷ್ಟಿಸಿದೇ ಸರಳವಾಗಿರಬೇಕು. ಈ ಎಲ್ಲಾ ಅನುಕೂಲತೆಗಳು ಜಿ. ಎಸ್. ಟಿ. ಕಾಯಿದೆಯಲ್ಲಿ ಈ ತೆರನಾಗಿ ಒಳಗೂಂಡಿದೆ.

ನೊಂದಣಿಯನ್ನು ಆನ್‌ಲೈನ ಮೂಲಕ ಮಾಡಿ ಜಿ. ಎಸ್. ಟಿ. ಆಡಳಿತದಲ್ಲಿ ತೆರಿಗೆದಾರನ ಮತ್ತು ತೆರಿಗೆ ಪ್ರಾಧಿಕಾರದ ನಡುವೆ ಅತಿ ಕಡಿಮೆ ಮುಖಾಮುಖಿಯಾಗಲು ಹಲವಾರು ಉಪಭಂಧ ಕಲ್ಪಿಸಲಾಗಿದೆ. ಹೂಡುವಳಿ ತೆರಿಗೆ ಜಮೆಯ ನಿರ್ಬಂಧನೆಗಳು ವಿವಾದವಾಗುವ ಸಂಭವವಿರುವುದರಿಂದ ಸದರಿ ಕಾಯ್ದೆಯಲ್ಲಿ ಸ್ಪಷ್ಟವಾದ/ನಿಖರವಾದ ವಾಜ್ಯಗಳಿಗೆ ಅವಕಾಶ ಇಲ್ಲದಂತಹ ಸವಿಸ್ತಾರವಾದ ಕಾರ್ಯ ನೀತಿಯನ್ನು ರೂಪಿಸಿದ್ದು ಇದರ ಮಹತ್ವದ ಸಾಧನೆ.

ಅಧಿಕಾರಿಗಳು ಆದೇಶಗಳನ್ನು ಹೂರಡಿಸುವ ಅತಿಯಾದ ವಿಳಂಬವಾಗುತ್ತಿದೆ ಎಂಬ ದೂರಗಳನ್ನು ಗಮನದಲ್ಲಿಟ್ಟು ಕೊಂಡು ಜಿ. ಎಸ್. ಟಿ. ಆರಂಭದಲ್ಲಿ ವಿಳಂಬ ತಡೆಗಟ್ಟಿ ಆಡಳಿತಗಾರರ ಅತಿಯಾದ ಹಸ್ತಕ್ಷೇಪದಿಂದ ಮುಕ್ತಿಗೂಳಿಸಲಾಗಿದೆ.

ಅದೇ ರೀತಿ ಅಮೆರಿಕಾದಲ್ಲಿ ಟ್ರಕ್‌ಗಳು ದಿನವೂಂದಕ್ಕೆ 800km ಚಲಿಸಿದರೆ ಭಾರತದಲ್ಲಿ ಈ ಪ್ರಮಾಣ ಕೇವಲ 270km ಏಕೆಂದರೆ ರಾಜ್ಯಗಳ ಗಡಿಗಳಲ್ಲಿ ಇರುವ ತಪಾಸಣಾ ಚೌಕಿ [check post] ಗಳ ಕಾಟದಿಂದ ಟ್ರಕಗಳು ಲಂಗರು ಹಾಕುತ್ತಿರುವುದು. ಇದಕ್ಕೆ ಜಿ. ಎಸ್. ಟಿ. ಏಕರೂಪ ತೆರಿಗೆ ವ್ಯವಸ್ಥೆಯಿಂದ 1 ಲಕ್ಷ ಕೋಟಿ ಜಿ. ಡಿ. ಪಿ. ಯಾಗಬಹುದೆಂದು ಆರ್ಥಿಕ ಆಶಾವಾದಿಗಳು ಭರವಸೆ ಇಟುಕೊಂಡಿದ್ದಾರೆ.

ಇವೆಲ್ಲಾ ಅಂಶಗಳು ನಮಗೆ ಗೊಚರಿಸುವುದು 2017 ಎಪ್ರೀಲ್ 01 ರ ನಂತರವೇ ಅಲ್ಲಿಯವರೆಗೆ ಈ ಅನುಕೂಲತೆಗಳಲ್ಲ ಕಾಯಿದೆಯ ಮೇಲಿನ ಊಹೆಗಳಷ್ಟೇ ಎಂಬುದನ್ನು ಮರೆಯಬಾರದು.

### ಜಿ.ಎಸ್.ಟಿ ಜಾರಿಯಾದ ನಂತರ ಆಗುವ ಅನಾನುಕೂಲಗಳು:

ಜಿ. ಎಸ್. ಟಿ. ಯಲ್ಲಿನ ಒಂದು ಪ್ರಮುಖ ಉನ್ಮಾದದ ಘೋಷಣೆ ಎಂದರೆ One India One Tax One Market ಆದರೆ ಏನು ಗೊತ್ತಿಲ್ಲದವರಿಗೆ ಇದು ಚನ್ನಾಗಿ ದಾರಿ ತಪ್ಪಿಸುತ್ತದೆ. ಜಿ. ಎಸ್. ಟಿ. ದೇಶ್ಯಾದ್ಯಾಂತ ಏಕದರವನ್ನೇನು ಏರ್ಪಡಿಸುವುದಿಲ್ಲ ವಿವಿಧ ಗ್ರಾಹಕರಿಗೆ ವಿವಿಧ ಸಮಿತಿಗಳು ಬೇರೆ ಬೇರೆ ದರಪಟ್ಟಿ ಸಲಹೆ ನೀಡುವುದು. ಇಂತಹ ಒಂದು ಸಮಿತಿಯ ಮುಖ್ಯಸ್ಥರಾದ ಮುಖ್ಯ ಆರ್ಥಿಕ ಸಲಹೆಗಾರರಾದ ಅರವಿಂದ ಸುಬ್ರಹ್ಮಣ್ಯರವರು 4 ಹಂತದ ತೆರಿಗೆ ಸೂತ್ರದ ಸಲಹೆ ನೀಡಿದ್ದಾರೆ.

ಒಂದು ಆದರ್ಶನಿಯ ಜಿ. ಎಸ್. ಟಿ. ಯಲ್ಲಿ ಎಲ್ಲಾ ರಾಜ್ಯಗಳಲ್ಲಿಯೂ ಒಂದು ವಸ್ತುವಿಗೆ ಒಂದೇ ತೆರಿಗೆಯ ದರ ಇರಬೇಕು ಎನ್ನುತ್ತವೆ. ಆದರೆ ಅನೇಕ ರಾಜ್ಯಗಳು ಹೆಚ್ಚುವರಿ ಮೇಲೆ ತೆರಿಗೆ ಮತ್ತು ವಿನಾಯಿತಿಗಳಿಗೆ ಅವಕಾಶ ನೀಡಿ ಎಂದು ಒತ್ತಾಯಿಸುತ್ತಿವೆ. ಅದರಲ್ಲಿ ಕೇರಳ ಮತ್ತು ತಮಿಳನಾಡು ತಮ್ಮದೆ ಆದ ದರ ವಿಧಿಸುವಂತೆ ಕಾಣುತ್ತದೆ. ಇದನ್ನು ಇತರೇ ರಾಜ್ಯಗಳಲ್ಲಿ ಅನುಕರಿಸೀದರೆ ಜಿ. ಎಸ್. ಟಿ. ಜಾರಿಗೆತರಲು ಅಡೆ ತಡೆ ಉಂಟಾಗುತ್ತದೆ.

ಜಿ. ಎಸ್. ಟಿ. ಜಾರಿಗೆಯಿಂದ ನಗರದ ತಪಾಸಣಾ ಚೌಕಗಳು ಮಾಯವಾಗಬೇಕು. ಇದೊಂದು ದೊಡ್ಡ ವರದಾನ ಆದರೆ ರಾಜ್ಯಗಳಲ್ಲಿ ಗಡಿಗಳಲ್ಲಿ "ಚೇಕ್ ಪೊಸ್ಟ" ಹಾಗೇಯೇ ಇಟ್ಟು ಕೊಂಡರೆ ಭ್ರಷ್ಟಾಚಾರ ವಿಳಂಭವೆನ್ನುವುದು ಮಾಯವಾಗುವುದಿಲ್ಲ.

ಒಂದೇ ತೆರಿಗೆ ಎಂಬ ವಿಚಾರ ಕಾರ್ಯರೂಪಕ್ಕೆ ಬಂದರೆ ರಾಜ್ಯಗಳ ಮೇಲೆ ಭಾರಿ "ಆರ್ಥಿಕ ಹೊರೆ" ಬೀಳುತ್ತದೆ ಎಂಬ ರಾಜ್ಯಗಳ ಅಳಲನ್ನು ನಿವಾರಿಸುವ ವ್ಯವಸ್ಥೆಯನ್ನು ಇನ್ನೂ ಗಟ್ಟಿಯಾಗಿಲ್ಲ ಎಂಬುವುದು ಜಿ. ಎಸ್. ಟಿ. ವಿರೋಧಿಸುವ ರಾಜ್ಯಗಳ ಅಭಿಪ್ರಾಯವಾಗುತ್ತದೆ.

ಜಿ. ಎಸ್. ಟಿ. ಪದ್ಧತಿಯನ್ನು ಒಪ್ಪಿಕೊಂಡ ರಾಜ್ಯಗಳಿಗೆ ಯಾವುದೇ ಆದಾಯದ ಹಾನಿಯಾದರೆ ಅದಕ್ಕೆ ತಕ್ಕ ಪರಿಹಾರ ಪಡೆಯಬಹುದು. ಆದರೆ ಆದಾಯ ನಷ್ಟವನ್ನು ಲೆಕ್ಕ ಮಾಡುವ ಬಗೆ ಹೇಗೆ ಎಂಬುವುದು ಅಸ್ಪಷ್ಟ ಇದೆ.

## ಉಪಸಂಹಾರ:

ಒಟ್ಟಾರೆ ಈ ಮೇಲಿನ ಜಿ. ಎಸ್. ಟಿ. ಯು ಹಿನ್ನಲೆ ಅದರ ಲಕ್ಷಣಗಳು, ಅದರಿಂದಾಗುವ ಸಾದಕ ಭಾದಕಗಳು ಸುಮಾರು 10ವರ್ಷಗಳ ಸುಧೀರ್ಘ ಸಮಾಲೋಚನೆಯ ನಂತರ ಭವಿಷ್ಯದಲ್ಲಿ ಭಾರತದ ತೆರಿಗೆ ವ್ಯವಸ್ಥೆಯನ್ನು ಸಂಪೂರ್ಣ ಸರಿದಾರಿಗೆ ತರುತ್ತದೆ ಎಂಬುವುದರಲ್ಲಿ ಸಂಶಯವೇ ಇಲ್ಲ.

ಜಿ. ಎಸ್. ಟಿ. ಕುರಿತಾಗಿ ಏನೇ ಟೀಕೆಗಳು, ಅನುಮಾನಗಳಿದ್ದರು ಅವು ಅನುಷ್ಠಾನ ಹಂತದಲ್ಲಿ ಬಗೆಹರಿಸಿ ರಾಜ್ಯ ಮತ್ತು ಕೇಂದ್ರಗಳ ಸಮನ್ವಯತೆಯಿಂದ ತೆರಿಗೆದಾರನಿಗೆ ತಾನು ನೀಡುವ ಪ್ರತಿ ರೂಪಾಯಿ ದೇಶದ ಅಭಿವೃದ್ಧಿಗೆ ಮುಟ್ಟುತ್ತಿವೆ ಎಂಬ ಭರವಸೆ ಮುಡಿಸಿದರೆ ಜಿ. ಎಸ್. ಟಿ. ದಾರಿಯು ಸುಗಮವಾಗುತ್ತದೆ.

ಸರಕಾರ ಇಟ್ಟುಕೊಂಡ ಮಹಾನ್ ಮಹತ್ವಾಕಾಂಕ್ಷೆ ಮುಟ್ಟುವುದರಲ್ಲಿ ಸಂಶಯವೇ ಇಲ್ಲ. ಜಿ. ಎಸ್. ಟಿ. ಹುಟ್ಟಿಸಿರುವ ನಿರೀಕ್ಷೆಗಳು ಯಾವುದು ಪೊಳಲ್ಲ ಅವು ನೈಜ ಎಂಬುವುದನ್ನು ಪರಿಷತ್ತಿನ ಕಾರ್ಯ ನೀತಿ ಪರಿಗಣಿಸಿ ನಿಸಂಶಯವಾಗಿ ಇದು ಭಾರತವನ್ನು ಮಹಾನ್ Super Country ಮಾಡುವುದರತ್ತ ದಾಪುಗಾಲು ಹಾಕುವಲ್ಲಿ ಶತಸಿದ.

## ಆಧಾರ ಗ್ರಂಥಗಳು:


1) ಜಿ. ಎಸ್. ಟಿ ಭಾರತ : ಆರ್ಥಿಕತೆ ಮತ್ತು ನೀತಿ 2015
2) ಸರ್ದನಾ ಎಮ್, ಭಾರತದಲ್ಲಿಯ ಇ–ವಾಣಿಜ್ಯದ ಮೌಲ್ಯಮಾಪನ ಭಾಗ–೩
3) www.ವಸ್ತು ಮತ್ತು ಸೇವಾತೆರಿಗೆ.com
4) ಅಪ್ರತ್ಯಕ್ಷ ತೆರಿಗೆ : ನೇಯ್ದ ವಸ್ತುವಿನ ಮೇಲೆ ಜಿ.ಎಸ್.ಟಿ
5) ತಾಡುನಾಥನ ಎಪ್, ಕ್ಷವಿರ ಪಿ.ಎ.: ಭಾರತದಲ್ಲಿ ವಸ್ತು ಮತ್ತು ಸೇವಾ ತೆರಿಗೆ ಅಳವಡಿಕೆಯ ಅಧ್ಯಯನ ಕಾರ್ಯ ವಿಶ್ಲೇಷಣೆ ಮತ್ತು ಸವಾಲು, ಇಂಟರ ನ್ಯಾಷನಲ್ ಜರ್ನಲ್ ಆಪ್ ಅಪಲ್ಲಾಯಿಡ್ ರಿಸರ್ಚ, 2017 ; 3(1) ;629-626





**ಡಾ. ನಾರಾಯಣ ಅರುಂದೇಕರ**
ಅತಿಥಿ ಉಪನ್ಯಾಸಕರು, ಅರ್ಥಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ನವಬಾಗ, ವಿಜಯಪುರ.





**ಡಾ. ಚಂದ್ರಪ್ರಭಾ ಎಮ್. ಪಟಗಾರ**
ಸಹಾಯಕ ಉಪನ್ಯಾಸಕರು, ಅಪರಾಧ ಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹಾವೇರಿ.





**ವಿಶ್ವನಾಥ ವಿ. ಕಲ್ಮೇಶ್ವರ**
ಅತಿಥಿ ಉಪನ್ಯಾಸಕರು, ವಾಣಿಜ್ಯ ಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ನವಬಾಗ, ವಿಜಯಪುರ.